ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ವಾಣಿ    ದಿನಾಂಕ : DATE 3/6/2020

# ಕೈಗಾರಿಕೆಗೆ ಪ್ರಧಾನಿ ಐದು ಸೂತ್ರ

ಉ.ವಾ. 3/6/20

## ನನ್ನ ಮೇಲೆ ಭರವಸೆ ಇಡಿ, ಆರ್ಥಿಕತೆ ಸರಿ ಮಾಡೋಣ ಎಂದು ಅಭಯ

**ನವದೆಹಲಿ:** ಕೊರೊನಾ ಬಿಕ್ಕಟ್ಟಿನಿಂದಾಗಿ ಕುಸಿದಿರುವ ದೇಶದ ಆರ್ಥಿಕತೆಯನ್ನು ಮೇಲೆತ್ತಲು ದೇಶದ ಕೈಗಾರಿಕಾ ರಂಗಕ್ಕೆ ಪ್ರಧಾನಿ ನರೇಂದ್ರ ಮೋದಿ, ಐದು 'ಐ'ಗಳ ಸೂತ್ರವೊಂದನ್ನು ನೀಡಿದ್ದಾರೆ.

ಕಾನ್ಫಿಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ) ಸಂಸ್ಥೆಯ 125ನೇ ವಾರ್ಷಿಕೋತ್ಸವ ಸಮ್ಮೇಳನವನ್ನು ಬುಧವಾರ ಆನ್‌ಲೈನ್‌ನಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, "intent (ಉದ್ದೇಶ), inclusion (ಒಳಗೊಳ್ಳುವಿಕೆ), invest ment (ಹೂಡಿಕೆ), infrastructure (ಮೂಲಸೌಕರ್ಯ) innovation (ಆವಿಷ್ಕಾರ) ಎಂಬ ಐದು ಅಂಶಗಳ ಸೂತ್ರಗಳನ್ನು ಅಳವಡಿಸಿಕೊಂಡಲ್ಲಿ, ಆರ್ಥಿಕ ಬೆಳವಣಿಗೆಯ ವೇಗವನ್ನು ಮತ್ತೆ ಹೆಚ್ಚಿಸಬಹುದು" ಎಂದು ತಿಳಿಸಿದರು.

"ನನ್ನ ಮೇಲೆ ಭರವಸೆಯಿಡಿ. ಕುಸಿದಿರುವ ಆರ್ಥಿಕತೆಯನ್ನು ಮತ್ತೆ ಸರಿದಾರಿಗೆ ಬರುವುದು ಕಷ್ಟವೇನಲ್ಲ. ಆತ್ಮನಿರ್ಭರ ಭಾರತ ನಿರ್ಮಿಸುವ ಹಾದಿ ಈ ದೇಶದ ಕೈಗಾರಿಕಾ ರಂಗದ ಮುಂದಿದೆ" ಎಂದ ಅವರು, "ನನ್ನಲ್ಲಿ ಭರವಸೆಯಿಡಿ. ಕುಂಠಿತವಾಗಿರುವ ದೇಶದ ಆರ್ಥಿಕ ಬೆಳವಣಿಗೆ ಖಂಡಿತ ಮರು ಬೆಳವಣಿಗೆ ಕಾಣುತ್ತದೆ. ಕಳೆದುಕೊಂಡಿರುವ ಮೆರುಗನ್ನು ನಮ್ಮ ಆರ್ಥಿಕತೆ ಮರಳಿ ಗಳಿಸುತ್ತದೆ. ಕಠಿಣ ಪರಿಶ್ರಮ ಪಡಲು ಈ ದೇಶದ ಉದ್ಯಮ ರಂಗ ಸಿದ್ಧವಿದೆ. ಎಷ್ಟೇ ಕಷ್ಟಕಾರ್ಪಣ್ಯಗಳನ್ನು ಎದುರಿಸಿದರೂ ಛಲ ಬಿಡದೇ ದುಡಿವಂಥ ಜನರು ನಮ್ಮಲ್ಲಿದ್ದಾರೆ. ಹೀಗಿರುವಾಗ ನಾವು ಏಕೆ ಹೆದರಬೇಕು" ಎಂದು ಅವರು ಪ್ರಶ್ನಿಸಿದರು.

▶ 5ನೇ ಪುಟಕ್ಕೆ




**ಚೀನಾ ಅಧಿಪತ್ಯ ಕಸಿಯಲು ಪರೋಕ್ಷ ಕರೆ**

**ಗ್ಲೋಬಲ್ ಸಪ್ಲೈ ಚೈನ್‌ನಲ್ಲಿ ಚೀನಾ ಹೊಂದಿರುವ ಅಧಿಪತ್ಯವನ್ನು ಕೊನೆಗಾಣಿಸುವಂತೆ ಪ್ರಧಾನಿ ಮೋದಿ, ಭಾರತೀಯ ಕೈಗಾರಿಕೋದ್ಯಮಿಗಳಿಗೆ ಪರೋಕ್ಷವಾಗಿ ಕರೆ ನೀಡಿದರು. ಅದಕ್ಕಾಗಿ, 'ಮೇಡ್ ಇನ್ ಇಂಡಿಯಾ, ಮೇಡ್ ಫಾರ್ ದ ವರ್ಲ್ಡ್' ಎಂಬ ಮೂಲಮಂತ್ರವನ್ನು ಎಲ್ಲಾ ಕೈಗಾರಿಕೆಗಳೂ ಮೈಗೂಡಿಸಿಕೊಳ್ಳಬೇಕು ಎಂದ ಅವರು, ಜಾಗತಿಕ ರಂಗದಲ್ಲಿ ಗುರುತಿಸಿಕೊಳ್ಳುವ ಮುನ್ನ ನಾವು ದೇಶೀಯ ಸಪ್ಲೈ ಚೈನ್ ಅನ್ನು ಸ್ವಾವಲಂಬಿ ಆಗಿಸಬೇಕಿದೆ. ದೇಶದೊಳಗೆ ಇದನ್ನು ಸಾಧಿಸಿದರೆ, ವಿಶ್ವಮಟ್ಟದಲ್ಲೂ ಸಾಧಿಸಬಹುದು ಎಂದು ಕಿವಿಮಾತು ಹೇಳಿದರು.**

# ಕೈಗಾರಿಕೆ ಬೆಳವಣಿಗೆಗೆ ಪ್ರಧಾನಿ ಐದು ಸೂತ್ರ

ಉ.ವಾ. 3/6/20

1ನೇ ಪುಟದಿಂದ ▶

**ಕೊರೊನಾ ವೇಗ ತಗ್ಗಿದೆ:** "ಮೊದಲಿಗೆ, ಕೊರೊನಾ ನಮ್ಮ ಆರ್ಥಿಕ ವೇಗವನ್ನು ತಡೆಯಿತು. ಆದರೀಗ ನಾವು ಅದರ ಹರಡುವಿಕೆ ವೇಗವನ್ನು ತಡೆದಿದ್ದೇವೆ" ಎಂದು ಹೇಳಿದ ಪ್ರಧಾನಿ, "ಅದರ ಪರಿಣಾಮವಾಗಿಯೇ, ನಾವು ಇಂದು, ಲಾಕ್‌ಡೌನ್‌ನಿಂದ ಅನ್‌ಲಾಕ್ 1.0 ಹಂತಕ್ಕೆ ಕಾಲಿಡಲು ಸಾಧ್ಯವಾಗಿದೆ ಎಂದರು. ಅರ್ಥಾತ್, ನಾವು ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಿ ಆರ್ಥಿಕ ಬೆಳವಣಿಗೆಯತ್ತ ಹೆಜ್ಜೆ ಹಾಕಲಾರಂಭಿಸಿದ್ದೇವೆ. ಹಾಗಾಗಿ, ನಮ್ಮ ಗುರಿಯನ್ನು ನಾವು ಬೇಗನೇ ಮುಟ್ಟಲಿದ್ದೇವೆ" ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

**'ವಿಶ್ವಮಟ್ಟಕ್ಕೆ ಬೆಳೆಯಲಿ':** ತಮ್ಮ ಭಾಷಣದಲ್ಲಿ ಕೈಗಾರಿಕೋದ್ಯಮಗಳಿಗೆ, ಸ್ಥಳೀಯ ಮಟ್ಟದ ಸ್ಫೂರ್ತಿಯ ಚಿಲುಮೆಯಾಗಿ ಎಂದು ಪ್ರಧಾನಿ ಮೋದಿ, "ವಿಶ್ವದ ಕೈಗಾರಿಕಾ ರಂಗ, ತನಗೊಂದು ಅತ್ಯುತ್ತಮ ಜೊತೆಗಾರ ಸಿಗಬೇಕೆಂದು ಹಂಬಲಿಸುತ್ತಿದೆ. ಆ ಹಂಬಲವನ್ನು ತುಂಬುವ ಶಕ್ತಿ, ಸಂಪನ್ಮೂಲ ಹಾಗೂ ಅರ್ಹತೆ ಭಾರತಕ್ಕಿದೆ. ಇದನ್ನು ಸರಿಯಾಗಿ ಬಳಸಿಕೊಂಡು ವಿಶ್ವಮಟ್ಟಕ್ಕೆ ಭಾರತೀಯ ಉದ್ಯಮಗಳು ಬೆಳೆಯಲಿ ಎಂದು ಹಾರೈಸಿದರು.